# ಆದಿಚುಂಚನಗಿರಿಯಲ್ಲಿ ನಾಥ ಸಂಪ್ರದಾಯದ ಮೂಲ ಬೇರುಗಳು

ಪಲ್ಲವಿ ಎಸ್.ಎನ್.[1] & ಶ್ವೇತಾರಾಣಿ ಹೆಚ್.[2]

[1]ಸಂಶೋಧನಾ ವಿದ್ಯಾರ್ಥಿನಿ, ಆದಿಚುಂಚನಗಿರಿ ವಿಶ್ವವಿದ್ಯಾಲಯ, ನಾಗಮಂಗಲ, ಮಂಡ್ಯ.

[2]ಸಹ ಪ್ರಾಧ್ಯಾಪಕಿ, ಆದಿಚುಂಚನಗಿರಿ ವಿಶ್ವವಿದ್ಯಾಲಯ, ನಾಗಮಂಗಲ, ಮಂಡ್ಯ.

DOI: https://doi.org/10.5281/zenodo.18116472

## ABSTRACT:

ಪ್ರಸ್ತುತ ಸಂಶೋಧನಾ ಲೇಖನವು ಮಂಡ್ಯ ಜಿಲ್ಲೆಯ ಆದಿಚುಂಚನಗಿರಿಯಲ್ಲಿ ನಾಥ ಸಂಪ್ರದಾಯದ ಐತಿಹಾಸಿಕ ವಿಕಾಸ ಮತ್ತು ಅದರ ಮೂಲ ಬೇರುಗಳನ್ನು ಪರಿಶೋಧಿಸುತ್ತದೆ. ಬೌದ್ಧ ಧರ್ಮದ ವಜ್ರಯಾನ ಹಾಗೂ ಶೈವ ಕಾಪಾಲಿಕ ಪಂಥಗಳ ಸಮ್ಮಿಲನದಿಂದ ನಾಥ ಪಂಥವು ಹೇಗೆ ಉದಯಿಸಿತು ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಕ್ರಿ.ಶ. 1029ರ ಶಾಸನ ಮತ್ತು ಕಾಲಭೈರವೇಶ್ವರನ ಸ್ಥಳಪುರಾಣಗಳ ಆಧಾರದೊಂದಿಗೆ, ಚುಂಚನಗಿರಿಯು ಪ್ರಾಚೀನ ಕಾಪಾಲಿಕ ಪೀಠದಿಂದ ನಾಥ ಪರಂಪರೆಯ ಪ್ರಮುಖ ಕೇಂದ್ರವಾಗಿ ಬದಲಾದ ಬಗೆಯನ್ನು ಲೇಖನ ವಿವರಿಸುತ್ತದೆ. ಶಿವ-ಶಕ್ತಿ ಸಿದ್ಧಾಂತ, ಕಾಯಸಿದ್ಧಿ ಮತ್ತು ಹಠಯೋಗದ ಮಹತ್ವವನ್ನು ವಿಶ್ಲೇಷಿಸುತ್ತಾ, ಈ ಪೀಠವು ಹೇಗೆ ಸಮಕಾಲೀನ ಸಮಾಜದಲ್ಲಿ ಅನ್ನ, ದಾಸೋಹ ಮತ್ತು ಶಿಕ್ಷಣದ ಮೂಲಕ ಆಧ್ಯಾತ್ಮಿಕ ಪರಂಪರೆಯನ್ನು ಮುಂದುವರಿಸುತ್ತಿದೆ ಎಂಬುದನ್ನು ಈ ಅಧ್ಯಯನವು ಪ್ರತಿಪಾದಿಸುತ್ತದೆ.

## KEYWORDS:

ಆದಿಚುಂಚನಗಿರಿ, ನಾಥ ಸಂಪ್ರದಾಯ, ಕಾಲಭೈರವೇಶ್ವರ, ಹಠಯೋಗ, ಕಾಪಾಲಿಕ ಪಂಥ.

ಭಾರತೀಯ ಸಾಮಾಜಿಕ, ಧಾರ್ಮಿಕ ಪರಂಪರೆಯಲ್ಲಿ ಧರ್ಮ, ಪಂಥ, ಮತಗಳ ಪ್ರಭಾವ ಮಹತ್ವವಾದದ್ದು. ಬುದ್ಧನ ಮಹಾಪರಿನಿರ್ವಾಣದ ನಂತರ ಬೌದ್ಧಧರ್ಮವು ಪ್ರವರ್ಧಮಾನಕ್ಕೆ ಬಂದಿತು. ಬುದ್ಧನ ನಿರ್ವಾಣದ ನಂತರ ಬೌದ್ಧ ಧರ್ಮದಲ್ಲಿ ಅನೇಕ ಭಿನ್ನ ಧಾರೆಗಳು ಹುಟ್ಟಿಕೊಂಡವು. ಇದರ ಪರಿಣಾಮ ಹೀನಯಾನ ಮತ್ತು ಮಹಾಯಾನ ಎಂಬ ಪಂಗಡಗಳು ಉದಯಿಸಿದವು. ಭಿನ್ನ ಸಿದ್ಧಾಂತಗಳೊಂದಿಗೆ ರೂಪಗೊಂಡ ಈ ಪಂಗಡಗಳಲ್ಲಿ ಮಹಾಯಾನವು ಬೋಧಿಸತ್ತ್ವರ ಬೋಧನೆಗಳನ್ನು ಪ್ರಚುರಪಡಿಸಿತು. ಈ ಬದಲಾವಣೆಯು ಹೊಸ ಮಂತ್ರಯಾನ ಅಥವಾ ವಜ್ರಯಾನ ಪಂಗಡದ ಉದಯಕ್ಕೆ ಕಾರಣವಾಯಿತು. ಈ ಸಂದರ್ಭದಲ್ಲಿ ಭಾರತದ ಬೇರೆ ಬೇರೆ ದಾರ್ಶನಿಕ ಧಾರೆಗಳು ಭ್ರಷ್ಟವಾಗಿದ್ದವು. ಬೌದ್ಧ ಧರ್ಮವು ಕೂಡ ಬುದ್ಧನ ಮಹಾಪರಿನಿರ್ವಾಣದ ನಂತರ ಬೇರೆ ಬೇರೆ ಆಚರಣೆ ಮತ್ತು ಸಂಪ್ರದಾಯಗಳನ್ನು ಸೇರಿಸಿಕೊಂಡಿತು. ಶೈವ ಕಾಪಾಲಿಕ ಪಂಥವು

ವಾಮಾಚಾರ ಮತ್ತು ದಕ್ಷಿಣಾಚಾರಗಳನ್ನು ಅನುಸರಿಸಿತು. ಮದ್ಯ, ಮಾಂಸಾದಿ ಪಂಚಮಕಾರಗಳು ಆಚರಣೆಯಲ್ಲಿ ಸೇರಿಕೊಂಡವು. ಯಜ್ಞ ಯಾಗಾದಿಗಳು ತಮ್ಮ ಮಹತ್ವವನ್ನು ಕಳೆದುಕೊಂಡು ಕೇವಲ ಆಚರಣೆಯ ಮಟ್ಟಕ್ಕೆ ಇಳಿದವು.

ಅಂದಿನ ಸಂದರ್ಭದಲ್ಲಿ ಆಚರಣೆಗಳು ಎಲ್ಲಿ ಅಡ್ಡ ದಾರಿಯನ್ನು ಹಿಡಿದವು ಎಂಬುದರ ಬಗ್ಗೆ ಗೋರಕ್ಷನಾಥ ತಮ್ಮ 'ಸಿದ್ಧ ಸಿದ್ಧಾಂತ ಪದ್ಧತಿ'ಯಲ್ಲಿ ವಿಮರ್ಶೆ ಮಾಡಿದ್ದಾರೆ. ಸಹಜವಾಗಿಯೇ ದಾರ್ಶನಿಕ ಸಂಪ್ರದಾಯಗಳಲ್ಲಿ ಪರಸ್ಪರ ಸಂಘರ್ಷಗಳು ಮೂಡಿದವು. ಈ ರೀತಿ ನಾಶವಾಗುತ್ತಿದ್ದಂತಹ ವಿಭಿನ್ನ ದಾರ್ಶನಿಕ ಧಾರೆಗಳ ಅಮೂಲ್ಯ ಅಂಶಗಳನ್ನು ತನ್ನಲ್ಲಿ ಉಳಿಸಿಕೊಂಡು ಉದಯವಾದದ್ದು ನಾಥ ಸಂಪ್ರದಾಯ. ಸರಳ ಆಚರಣೆಗಳು ಜನಸಾಮಾನ್ಯರ ಹೃದಯ ಮಿಡಿತವನ್ನು ಅವಲಂಬಿಸಿದ್ದವು. ಇವರ ಆಚರಣೆ, ಸಿದ್ಧಾಂತಗಳು ಜನಸಾಮಾನ್ಯರನ್ನು ತಮ್ಮತ್ತ ಆಕರ್ಷಿಸಲು ಅನುಕೂಲವಾದವು. ನಾಥ ಸಂಪ್ರದಾಯವು ಆದಿನಾಥನಾದ ಶಿವನಿಂದ ಸೃಷ್ಟಿಯಾದದ್ದು ಎಂಬುದು ಪಾರಂಪರಿಕ ನಂಬಿಕೆಯಾಗಿದೆ. ನಾಥ ಸಿದ್ಧರು ಗುರು ಶಿಷ್ಯ ಪರಂಪರೆಯ ಸಾಧನೆಯನ್ನು ಜಗತ್ತಿಗೆ ತಿಳಿಸಿದರು. ನಾಥ ಸಂಪ್ರದಾಯದಲ್ಲಿ 84 ಸಿದ್ಧರನ್ನು ಕೂಡ ಗುರುತಿಸಲಾಗಿದೆ.

ನಾಥ ಸಂಪ್ರದಾಯದಲ್ಲಿ ಶಿವ ಮತ್ತು ಶಕ್ತಿಯ ಅಭೇದ ಕಲ್ಪನೆ ಹಾಗೆಯೇ ಪಿಂಡಾಂಡ ಮತ್ತು ಬ್ರಹ್ಮಾಂಡದ ಕಲ್ಪನೆಯನ್ನು ಕಾಣಬಹುದು. ನಾಥ ಸಂಪ್ರದಾಯದಲ್ಲಿ ಶಿವ ಮತ್ತು ಶಕ್ತಿಯ ಸ್ವರೂಪದ ಅಭೇದ ಕಲ್ಪನೆಯನ್ನು ಕಾಣಬಹುದು. "ಶಕ್ತಿ ವಿನಾ ಶಿವನು ಶವನಾಗುತ್ತಾನೆ"[1] ಎಂಬುದಾಗಿ ಗೋರಕ್ಷನಾಥರು ರಚಿಸಿರುವ "ಸಿದ್ಧ ಸಿದ್ಧಾಂತ ಪದ್ಧತಿ" ಎಂಬ ಗ್ರಂಥದ ಒಂದು ಶ್ಲೋಕದಿಂದ ಸ್ಪಷ್ಟವಾಗುತ್ತದೆ.

**"ಶಿರೋಪಿ ಶಕ್ತಿರಹಿತಃ ಕರ್ತು ಶಕ್ತೋನ ಕಿಂಚನ ।**
**ಸ್ವಶಕ್ತ್ಯಾಯ ಸಹಿತಃ ಸೋಪಿ ಸರ್ವಸ್ಯಾಭಾಸಕೋ ಭವೇತ್".[2]**

ಇದರ ಅರ್ಥ ಶಿವ ಶಕ್ತಿ ರಹಿತ, ಅವನಿಗೆ ಸ್ವಶಕ್ತಿ ಇರುವುದಿಲ್ಲ. ಶಿವನು ತಾನೇ ಬಲ್ಲವನೆಂದು ಅವನಿಗೂ ಗೊತ್ತಿರುವುದಿಲ್ಲ. ಶಕ್ತಿ ಇಲ್ಲದಿದ್ದರೆ ಶಿವನು ಏನೂ ಮಾಡಲಾರ. ಶಿವ ಶಕ್ತಿಯರ ಸಂಬಂಧವು ಚಂದ್ರ ಚಕೋರನಂತೆ ಅನ್ಯೋನ್ಯವಾದದ್ದು ಎಂಬ ರೀತಿಯಲ್ಲಿ ಶಿವಶಕ್ತಿಯರನ್ನು ಆರಾಧಿಸುವರು. ಹೀಗಾಗಿ ಶಿವಶಕ್ತಿಯ ಆರಾಧನೆಯು ನಾಥ ಸಂಪ್ರದಾಯದಲ್ಲಿ ಅಂತರ್ಗತ ಸಿದ್ಧಾಂತವಾಗಿದೆ. ನಾಥರ ಸಿದ್ಧಾಂತದಲ್ಲಿ ಪಿಂಡಾಂಡವು ಸೂಕ್ಷ್ಮರೂಪದ ಬ್ರಹ್ಮಾಂಡವಾಗಿದೆ. ಪಿಂಡದೊಳಗಣ ಜೀವಾತ್ಮವು ಶಿವನೊಂದಿಗೆ ಸಮೀಕರಣ ಸಾಧಿಸುವುದೇ ನಾಥಯೋಗಿಗಳ ಪರಮ ಧ್ಯೇಯವಾಗಿದೆ. ಭಾರತೀಯ ಪ್ರಾಚೀನ ಪರಂಪರೆಯ ಯೋಗ ಮಾರ್ಗವನ್ನು ನಾಥ ಸಂಪ್ರದಾಯ ಪರಿಷ್ಕರಿಸಿತು. ಪತಂಜಲಿಯ ಯೋಗ ಸೂತ್ರಗಳಲ್ಲಿನ ವಿಚಾರಗಳಿಗಿಂತಲೂ ಭಿನ್ನವಾದ ಮಾರ್ಗವನ್ನು ಬೋಧಿಸಿತು. ಪತಂಜಲಿಯಲ್ಲಿ ಮೋಕ್ಷ ಸಾಧನೆಯ ಬಗ್ಗೆ ಹೇಳುವಾಗ ಆರು ಚಕ್ರಗಳನ್ನು ಉಲ್ಲೇಖಿಸಲಾಗಿದೆ. ಆದರೆ ನಾಥ ಸಂಪ್ರದಾಯದಲ್ಲಿ ಮೋಕ್ಷ ಸಾಧನೆಗೆ 'ಎಂಟು ಚಕ್ರ'ಗಳ ಉಲ್ಲೇಖವಿದೆ.

ಷಟ್ಚಕ್ರಗಳ ಜೊತೆಗೆ ಅಗ್ನಿಚಕ್ರ, ಕುಂಡಲಿನೀ ಚಕ್ರಗಳೂ ಸೇರಿವೆ. ಪತಂಜಲಿಯ ಯೋಗ ಮಾರ್ಗದಲ್ಲಿ ಕಾಯಕ್ಕೆ ಮಹತ್ವವಿಲ್ಲ, ಸಮಾಧಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಆದರೆ ನಾಥ ಸಂಪ್ರದಾಯದಲ್ಲಿ ಕಾಯಸಿದ್ಧಿಗೆ ಅಂದರೆ ಭೌತಿಕ ಕಾಯಕ್ಕೆ ಮಹತ್ವ ನೀಡಲಾಗಿದೆ.

ನಾಥ ಸಂಪ್ರದಾಯವು ತನ್ನ ಸಮಕಾಲೀನ ಇತರ ಪಂಥಗಳೊಂದಿಗೆ ಸಂಬಂಧವನ್ನು ಹೊಂದಿದೆ. ನಾಥ ಸಂಪ್ರದಾಯವು ವಜ್ರಯಾನ, ಪಾಶುಪತ, ಕಾಳಾಮುಖ, ಕೌಳ, ಯೋಗಿನಿ, ಕಾಪಾಲಿಕ, ಶಾಕ್ತ ಈ ಪಂಥಗಳೊಂದಿಗೂ ಸಂಬಂಧ ಹೊಂದಿದೆ. ಅಲ್ಲದೆ ಮಹಾನುಭಾವ, ವಾರಕರಿ, ಲಿಂಗಾಯತ, ವೈಷ್ಣವ, ದತ್ತ, ರಸಸಿದ್ಧ, ಸೂಫಿ, ನಾನಕ, ಕಬೀರ ಪಂಥಗಳ ನಡುವೆ ಸಂಬಂಧವಿರುವುದನ್ನು ನೋಡಬಹುದು. ವಿದ್ವಾಂಸರ ಪ್ರಕಾರ ನಾಥ ಸಂಪ್ರದಾಯವು ಬೌದ್ಧ ಸಿದ್ಧ ಪರಂಪರೆಯ ಹಾಗೂ ಶೈವ ಪಂಥದ ಅಂಶಗಳ ಸಂಗಮವಾಗಿದೆ. ನಾಥ ಸಂಪ್ರದಾಯವು ದಕ್ಷಿಣಾಚಾರವನ್ನು ಅಂಗೀಕರಿಸಿತು. ರಾತ್ರಿ ವೇಳೆ ಆಚರಣೆಗಳು, ತಂತ್ರ, ಮಂತ್ರ, ಸ್ಮಶಾನವಾಸ, ಮಲ ಮೂತ್ರ ಸೇವನೆ, ಸೋಮ ಸಿದ್ಧಾಂತ ಅಂದರೆ ಸೋಮರಸದ ಸೇವನೆ, ಸ್ತ್ರೀಯೊಂದಿಗೆ ಸಮ್ಮಿಲನ ಇವೆಲ್ಲ ಕಾಪಾಲಿಕರ ವಾಮಮಾರ್ಗದ ಆಚರಣೆಗಳಾಗಿವೆ. ಈ ಬಗೆಯ ಆಚರಣೆಗಳನ್ನು ನಾಥ ಸಂಪ್ರದಾಯವು ಅನುಮೋದಿಸುವುದಿಲ್ಲ. ನಾಥ ದರ್ಶನಗಳಲ್ಲಿ ದೇವರ ಕಲ್ಪನೆ ಇರಲಿಲ್ಲ. ಆದರೆ ಕಾಪಾಲಿಕರ ಸಮಾಗಮನದಿಂದ ಪ್ರಾಪ್ತವಾಯಿತು. ಮುಂದೆ ಕಾಪಾಲಿಕ ಪಂಥವು ನಾಥ ಸಂಪ್ರದಾಯದೊಡನೆ ವಿಲೀನವಾಯಿತು. ಭೈರವನ ಆರಾಧನೆಯು ಕಾಪಾಲಿಕರ ಕುರುಹಾಗಿದೆ. ಭಾರತದಲ್ಲಿ ನಾಥ ಸಂಪ್ರದಾಯವು ಏಕರೂಪದ್ದಲ್ಲ, ಅನೇಕ ದರ್ಶನಗಳಿಂದ ಕಾಲಕಾಲಕ್ಕೆ ಸ್ವೀಕಾರ ಮಾಡುತ್ತಾ ತನ್ನದೇ ಆದಂತಹ ಆಧ್ಯಾತ್ಮಿಕ ನೆಲೆಯನ್ನು ಸೃಷ್ಟಿಸಿದೆ. ಒಂದು ಮತ್ತೊಂದರಿಂದ ಹುಟ್ಟಿತು ಎಂಬುದು ವಸಾಹತುಶಾಹಿ ಆಲೋಚನೆಯಾಗಿದೆ. ಇದನ್ನು ಭಾರತೀಯ ಸಂಸ್ಕೃತಿಯ ಬಹುದಾರ್ಶನಿಕತೆ, ಬಹುಪಂಥೀಯತೆ ಮತ್ತು ಸಂಕೀರ್ಣ ರಚನೆಯ ಹಿನ್ನೆಲೆಯಲ್ಲಿ ಕಾಣುವುದು ಸೂಕ್ತವಾದದ್ದು.

ಕರ್ನಾಟಕದಲ್ಲಿ ನಾಥ ಸಂಪ್ರದಾಯದ ನೆಲೆಗಳೆಂದರೆ ಹಂಡಿ ಬಡಗನಾಥ, ಚಂದ್ರಮುಖಿ ಯೋಗೀಶ್ವರ ಮಠ, ಹಲವರಿ ಮಠ, ಬರ್ಕೂರು, ಮಂಗಳೂರಿನ ಕದ್ರಿ ಯೋಗೇಶ್ವರ ಮಠ, ಲುಂಕೆಮಲೆ, ಸೀತಿಗುಡ್ಡ, ಯಾಣ, ಆದಿಚುಂಚನಗಿರಿ ಮುಂತಾದವುಗಳಾಗಿವೆ.

**ಆದಿಚುಂಚನಗಿರಿ:**

ಪ್ರಾಚೀನ "ಕಾಪಾಲಿಕ ಪೀಠಗಳಲ್ಲಿ"[3] ಒಂದಾದ ಆದಿಚುಂಚನಗಿರಿಯು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿದೆ. ಹಸಿರು ಕಾನನದಿಂದ ಕೂಡಿದ ರಮಣೀಯವೂ ಪ್ರಶಾಂತವೂ ಆದ ಈ ಕ್ಷೇತ್ರವು ಪರಶಿವನ ತಪೋಭೂಮಿಯಾಗಿತ್ತು ಎಂದು ಪುರಾಣ ಮತ್ತು ಜನಪದ ಸಾಹಿತ್ಯದಿಂದ ತಿಳಿದು ಬರುತ್ತದೆ. ಗಂಗಾಧರೇಶ್ವರನು ಇಲ್ಲಿಯ ಅಧಿದೇವತೆ, ಕಾಲಭೈರವೇಶ್ವರನು ಕ್ಷೇತ್ರಪಾಲಕನಾಗಿದ್ದಾನೆ. ನಾಥ

ಸಂಪ್ರದಾಯದ ದ್ವಾದಶ ಕ್ಷೇತ್ರಗಳಲ್ಲಿ ಪ್ರಪ್ರಥಮವಾದ ಚುಂಚನಗಿರಿಯು 'ಆದಿ' ಎಂಬ ವಿಶೇಷಣದೊಂದಿಗೆ ಆದಿಚುಂಚನಗಿರಿಯಾಯಿತು. ಪರಶಿವನಾದ ಆದಿರುದ್ರ ಮೊದಲಿಗೆ ಇಲ್ಲೇ ತಪಸ್ಸು ಮಾಡಿ ಕಾಪಾಲಿಕ ಯೋಗಿಗಳ ಪೀಠ ಸ್ಥಾಪಿಸಿ, ಅವನಿಂದಲೇ ಆವಿರ್ಭವಿಸಿದ ಸಿದ್ಧಯೋಗಿಯನ್ನು ಪ್ರಥಮವಾಗಿ "ಕಾಪಾಲಿಕ ಕ್ಷತ್ರಿಯ ಯೋಗಿಗಳ ಪೀಠ"ದ[4] ಉತ್ತರಾಧಿಕಾರಿಯಾಗಿ ನೇಮಿಸಿದ್ದರಿಂದ 'ಆದಿ' ಎಂಬ ಹೆಸರು ಬಂದಿದೆ. ಹಾಗೆಯೇ ನಾಥ ಸಂಪ್ರದಾಯದ 12 ಮಠಗಳಲ್ಲಿ ಪೀಠಾಧಿಪತಿಯನ್ನು ನೇಮಿಸುವ ಅಧಿಕಾರ ಚುಂಚನಗಿರಿ ಮಠಕ್ಕೆ ಇದ್ದುದರಿಂದ 'ಆದಿ' ಎಂಬ ಪದ ಬಂದಿದೆ. ಸ್ಥಳ ಪುರಾಣದ ಪ್ರಕಾರ ಇಲ್ಲಿ ಚುಂಚ ಎಂಬುವ ರಾಕ್ಷಸನು ವಾಸವಾಗಿದ್ದ. ರಮ್ಯವಾದ ಗಿರಿಧಾಮವಾಗಿರುವುದರಿಂದ ಆದಿಚುಂಚನಗಿರಿ ಎಂಬ ಹೆಸರು ಬಂದಿದೆ. ಶ್ರೀರಾಮನು ಸೀತೆಯನ್ನು ಹುಡುಕುತ್ತಾ ಚುಂಚನಕಟ್ಟೆಗೆ ಬಂದನು.

"ಆದಿಚುಂಚನಗಿರಿ ಸ್ಥಲ ಮಹಾತ್ಮ್ಯ" ಕೃತಿಯಿಂದಾಗಿ ಈ ಕ್ಷೇತ್ರದ ಮಹತ್ವವನ್ನು ತಿಳಿಯಬಹುದು. ಹಿಂದೆ ದುರ್ವಾಸ ಮುನಿಯು ಋಷ್ಯಶೃಂಗ ಮುನಿಗೆ ಹೇಳಿದ ಶೈವ ಪುರಾಣ ರಹಸ್ಯವನ್ನು ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ತಿಳಿಸುವನು. ಒಮ್ಮೆ ಪರಶಿವನು ಪಾರ್ವತಿ ದೇವಿಯಿಂದ ಕೋಪಗೊಂಡನು. ನಂತರ ಕಾಪಾಲಿ ರೂಪವನ್ನು ತಾಳಿ ಕಾಪಾಲಿ ಮತವನ್ನು ಭೂಲೋಕದಲ್ಲಿ ಪ್ರಚಾರ ಮಾಡಲು ತನ್ನ ಅಂಶದಿಂದ ಜನಿಸಿದ ಸಿದ್ಧಯೋಗಿಯನ್ನು ನೇಮಿಸಿದ ವೃತ್ತಾಂತವನ್ನು ಈ ಮಹಾತ್ಮೆಯಲ್ಲಿ ಹೇಳಲಾಗಿದೆ. ಅಗಸ್ತ್ಯ ಮುನಿಯು ಶಿವನನ್ನು ಕುರಿತು ತಪಸ್ಸು ಮಾಡಿದನು. ಪ್ರಸನ್ನನಾದ ಶಿವ ದರ್ಶನ ನೀಡಿ ಅಗಸ್ತ್ಯ ಮುನಿ ಮತ್ತು ಪತ್ನಿ ಲೋಪಾಮುದ್ರೆಗೆ ಆಶೀರ್ವದಿಸಿದನು. ಪಾರ್ವತಿ ಶಿವನನ್ನು ಪರಸ್ತ್ರೀಯನ್ನು ನೋಡುವುದು ಸರಿಯಲ್ಲವೆಂದು ಆಕ್ಷೇಪಿಸಿದಳು. ಶಿವೆಗೆ ಮುನಿದ ಶಿವನು ಸಿದ್ಧಯೋಗಿಯಾಗಿ ಲೋಕ ರಕ್ಷಣೆಗೆ "ಕಾಪಾಲಿಕಾವತಾರ"[5] ಧರಿಸಿದನು. ಈಶ್ವರನ ಕಪಾಲದಿಂದ ಸಿದ್ಧಯೋಗಿಯು ಜನಿಸಿದನು. ಪೀಠವನ್ನು ಸಿದ್ಧಯೋಗಿಗೆ ಬಿಟ್ಟುಕೊಟ್ಟ ಈಶ್ವರನು ಸಿದ್ಧಯೋಗಿಗೆ "ನೀನು ಸದಾಕಾಲ ಭೂಮಿಯಲ್ಲಿ ಸಂಚರಿಸುತ್ತಾ ಕಾಪಾಲಿಕ ಯೋಗಿಗಳ ಪೀಠಾಧಿಪತಿಯಾಗಿ ನಾಥ ಸಿದ್ಧರುಗಳಿಗೆ ಆಧ್ಯಾತ್ಮ ಜ್ಞಾನವನ್ನು ಬೋಧಿಸು" ಎಂದು ಹರಸಿದನು. ಅಂದಿನಿಂದ ಆದಿಚುಂಚನಗಿರಿ ಪೀಠವು ಕಪಾಲಯೋಗಿಗಳ ಮತ್ತು ನಾಥಸಿದ್ಧರ ಭೈರವ ಆರಾಧನೆಯ ಕ್ಷೇತ್ರವಾಯಿತು.

ಶಿವ ಭೈರವನ ಅವತಾರ ತಾಳಿ ಆದಿಚುಂಚನಗಿರಿಯಲ್ಲಿ ನೆಲೆಸಿದ ಬಗ್ಗೆ ಒಂದು ಪುರಾಣ ಕಥೆ ಇದೆ. ಒಮ್ಮೆ ಶ್ರೇಷ್ಠತೆಯ ಜಗಳದಿಂದ ಶಿವನು ಬ್ರಹ್ಮನ ಶಿರವನ್ನು ಛೇದಿಸಿದನು. ಬಳಿಕ ಶಿವನ ಕೈಗೆ ಬ್ರಹ್ಮಕಪಾಲ ಅಂಟಿಕೊಂಡಿತು. ಪರಿಹಾರಕ್ಕಾಗಿ ಶಿವ ತೀರ್ಥಯಾತ್ರೆಯನ್ನು ಕೈಗೊಂಡು ಚುಂಚನಕಟ್ಟೆಗೆ ಬಂದನು. ಇದೇ ವೇಳೆಯಲ್ಲಿ ಶ್ರೀರಾಮನು ಸೀತೆಯನ್ನು ಹುಡುಕುತ್ತಾ ಚುಂಚನಕಟ್ಟೆಗೆ ಬಂದನು. ಹಾಗೆ ಬಂದ ಶ್ರೀರಾಮನಿಗೆ ಚುಂಚನಕಟ್ಟೆಯನ್ನು ಬಿಟ್ಟುಕೊಟ್ಟು ಪ್ರಕೃತಿಯ ರಮಣೀಯ ಸ್ಥಳವಾದ ಚುಂಚನಗಿರಿಯಲ್ಲಿ ಬಂದು ನೆಲೆಸಿದನೆಂಬ ಪ್ರತೀತಿಯೂ ಇದೆ. ಮೊದಲೇ ಇಲ್ಲಿ ವಾಸವಾಗಿದ್ದ ಚುಂಚ, ಕಂಚ ಎಂಬ ರಾಕ್ಷಸರು ಅಲ್ಲಿನ ಜನರಿಗೆ ಅನೇಕ

ತೊಂದರೆಗಳನ್ನು ನೀಡುತ್ತಿದ್ದರು. ಅವರಿಬ್ಬರನ್ನು ನಿಗ್ರಹಿಸಿ, ಚುಂಚನನ್ನು ತನ್ನ ಶ್ವಾನದ ರೂಪದಲ್ಲಿ ವಾಹನವನ್ನಾಗಿ ಮಾಡಿಕೊಂಡನು. ಮುಂದೆ ಕಾಲಭೈರವನಾಗಿ ಶಿಷ್ಟರನ್ನು ರಕ್ಷಿಸುತ್ತಾ ದುಷ್ಟರನ್ನು ಶಿಕ್ಷಿಸುತ್ತಾ ಈ ಕ್ಷೇತ್ರದಲ್ಲಿ ನೆಲೆಸಿದನು ಎಂದು ಸ್ಥಳಪುರಾಣದಲ್ಲಿ ಹೇಳಲಾಗಿದೆ.

ಆದಿಚುಂಚನಗಿರಿಯು ನಾಥ ಕೇಂದ್ರವೋ ಕಾಪಾಲಿಕರ ಕೇಂದ್ರವೋ ಎಂಬ ಬಗ್ಗೆ ಗೊಂದಲವಿತ್ತು. "ಚುಂಚನಗಿರಿಯ 1029ರ ಶಾಸನದ ಪ್ರಕಾರ ಛಾಯಾಪರಮೇಶ್ವರನ ಮಗ ಸ್ತಂಭನಾಥ, ಅವನ ಮಗ ದೀಪನಾಥ, ಅವನ ಶಿಷ್ಯ ಮೌನಿನಾಥ, ಅವನ ಶಿಷ್ಯ ರೂಪಶಿವ ಇದು ಪರಂಪರೆಯ ದ್ಯೋತಕ. ಇದು ಚುಂಚನಗಿರಿಯನ್ನು ಆಳಿದ ನಾಲ್ಕನೆಯ ಯತಿ ಶಿವನಾಥನಿಗೆ ಸಂಬಂಧಪಟ್ಟದ್ದು ಎಂದು ಭಾವಿಸಲಾಗಿದೆ".[6] ಮೇಲಿನ ಶಾಸನ ದೊರೆತ ನಂತರ ಚಿದಾನಂದಮೂರ್ತಿಯವರು "ನಾಥ ಸಂಪ್ರದಾಯವು ಕರ್ನಾಟಕದಲ್ಲಿತ್ತು ಎಂಬುದಕ್ಕೆ ಶಾಸನಾಧಾರಗಳಿವೆ"[7] ಎಂಬುದಾಗಿ ಹೇಳಿದ್ದಾರೆ. "ಕದ್ರಿ ಮತ್ತು ಆದಿಚುಂಚನಗಿರಿಗಳು ನಾಥ ಸಂಪ್ರದಾಯದ ಪ್ರಮುಖ ಕೇಂದ್ರಗಳು"[8] ಎಂಬುದಾಗಿ ಈ ಶಾಸನ ಸ್ಪಷ್ಟ ಆಧಾರ ಎಂದು ಹೇಳಿದ್ದಾರೆ.

ನಾಥ ಸಂಪ್ರದಾಯವು ಚುಂಚನಗಿರಿಯಲ್ಲಿ ಅಸ್ತಿತ್ವದಲ್ಲಿತ್ತು ಎಂಬುದಕ್ಕೆ ಇತರ ಆಧಾರಗಳು ಇವೆ. ಮಠದ ಗೋಡೆಗಳಲ್ಲಿ ಕೆತ್ತಲಾಗಿರುವ ಧ್ಯಾನ ಭಂಗಿಯ ನಾಥ ಯೋಗಿಗಳ ಶಿಲ್ಪಗಳು, ಸಿದ್ಧಸಿಂಹಾಸನ (ಸಿದ್ಧಸಿಂಹಾಸನದಲ್ಲಿ ಗೋರಕ್ಷನಾಥ ತಪಸ್ಸು ಮಾಡಿದರು ಎಂಬ ಐತಿಹ್ಯವಿದೆ), ಜ್ವಾಲಾಪೀಠ, ಬೆಟ್ಟದಲ್ಲಿರುವ ಗುಹೆಗಳು, ನಾಗಚಾವಡಿ ಎಂಬ ಧುನಿಯ ಜಾಗ, ದೇವನಾಗರಿ ಲಿಪಿಯಲ್ಲಿ ಹಿಂದಿ ಭಾಷೆಯಲ್ಲಿರುವ ನಾಥ ಸಮಾಧಿ ಶಾಸನಗಳು, ಬಾರಾ ಪಂಥದ ಪ್ರಸ್ತಾಪ, ಜೋಗಿಗಳಿಗೆ ಜನಪದ ಸಾಹಿತ್ಯದಲ್ಲಿ 'ಪರದೇಸಿ' ಎಂದು ಕರೆದಿರುವುದು – ಇವೆಲ್ಲ ನಾಥರ ಇರುವಿಕೆಯನ್ನು ತಿಳಿಸಿದರೆ, ಚುಂಚನಗಿರಿಯು ಕಾಪಾಲಿಕರ ಯೋಗ ಸಾಧನೆಯ ನೆಲೆಯಾಗಿತ್ತು ಎಂಬುದಕ್ಕೆ ಅನೇಕ ಕುರುಹುಗಳಿವೆ. ಭೈರವ ಗುಡಿ, ರುಂಡಶಿಲ್ಪಗಳು, ಕಂಬಗಳ ಮೇಲಿರುವ ರುಂಡಮಾಲಾಧಾರಿ ದ್ವಾರಪಾಲಕರು, ಬೆಟ್ಟದ ಕೆಳಗಿನ ಹಳ್ಳಿಗಳಲ್ಲಿರುವ ಕಾಪಾಲಿಕ ಸಮುದಾಯ – ಇವು ಕಾಪಾಲಿಕ ಪಂಥದ ಲಕ್ಷಣವನ್ನು ಸೂಚಿಸುತ್ತವೆ. ಗಂಗಾಧರೇಶ್ವರ ದೇವಾಲಯದಲ್ಲಿ ಮೇದರ ತಲೆಯು ಕಾಪಾಲಿಕರ ನರಬಲಿಯ ದ್ಯೋತಕವಾಗಿದೆ. ಈ ಕಾಪಾಲಿಕ ಮತವು ಯಾವ ಕಾಲಘಟ್ಟದಲ್ಲಿ ನಾಥ ಸಂಪ್ರದಾಯವಾಗಿ ಮಾರ್ಪಟ್ಟಿತು ಎಂಬುದು ಖಚಿತವಾಗಿ ತಿಳಿಯುವುದು ಕಷ್ಟ. ಕಾಪಾಲಿಕರು, ನಾಥರು ಒಟ್ಟಿಗೆ ಇದ್ದರು ಎಂಬುದನ್ನು ಹೇಳಬಹುದು.

ಚುಂಚನಗಿರಿಯ 1029ರ ದೇವನಾಗರಿ ಶಾಸನದಲ್ಲಿ ಶಿವನ ಹೆಸರಿದೆ. 10ನೇ ಶತಮಾನದಿಂದಲೇ ಇಲ್ಲಿ ಕಾಪಾಲಿಕ ನಾಥಪಂಥ ಇತ್ತು ಎಂಬುದು ಸ್ಪಷ್ಟವಾಗುತ್ತದೆ. 'ಆದಿಚುಂಚನಗಿರಿ ಸ್ಥಲ ಮಹಾತ್ಮ್ಯೆ'ಯ ಪ್ರಕಾರ ಚುಂಚನಗಿರಿಯಲ್ಲಿ ಇಲ್ಲಿಯವರೆಗೆ 68 ಯೋಗಿಗಳು ಪೀಠಾಧ್ಯಕ್ಷರಾಗಿದ್ದಾರೆ. ಸುಮಾರು 800 ವರ್ಷಗಳ ಪರಂಪರೆ ಇದೆ. ಬಾರಾಪಂಥದ ಕೊನೆಯ ಯೋಗಿಯಾದ ತೇಜೋನಾಥರ

ನಂತರ ಮಠದ ಪಟ್ಟಾಧಿಕಾರಿ ಸ್ಥಾನಕ್ಕೆ ತಮ್ಮ ಶಿಷ್ಯನ ನಾಮವನ್ನು ತಿಳಿಸದ ಕಾರಣ, ಪ್ರಬಲ ಒಕ್ಕಲಿಗ ಸಮುದಾಯವು ಪೀಠವನ್ನು ತಮ್ಮ ಅಧಿಕಾರಕ್ಕೆ ತೆಗೆದುಕೊಂಡಿತು. ಮುಂದೆ ಗುರುಪರಂಪರೆ ಮುಂದುವರಿದು ತೇಜೋನಾಥರ ನಂತರ ಭಕ್ತನಾಥ, ಚಂದ್ರಶೇಖರನಾಥ, ರಮಾನಂದನಾಥ, ಬಾಲಗಂಗಾಧರನಾಥ, ನಿರ್ಮಲಾನಂದನಾಥರು ಪೀಠಾಧ್ಯಕ್ಷರಾಗಿದ್ದಾರೆ. ಬಾಲಗಂಗಾಧರನಾಥ ಸ್ವಾಮೀಜಿ ಅವರು 71ನೇ ಪೀಠಾಧ್ಯಕ್ಷರಾದರೆ, ನಿರ್ಮಲಾನಂದನಾಥ ಸ್ವಾಮೀಜಿ ಅವರು 72ನೇ ಪೀಠಾಧ್ಯಕ್ಷರಾಗಿದ್ದಾರೆ. ಈ ಯೋಗಿ ಸಾಧಕರಿಂದ ದಕ್ಷಿಣ ಭಾರತದಲ್ಲಿ ಜೀವಂತ ನಾಥ ಸಂಪ್ರದಾಯ ಯೋಗಿ ಪೀಠವಾಗಿ ಮುಂದುವರೆಯುತ್ತಿರುವುದು ಶ್ಲಾಘನೀಯವಾಗಿದೆ. ಹಸಿದವರಿಗೆ ಅನ್ನ, ಜ್ಞಾನಸುಧೆಯನ್ನು ಹರಿಸುವ ಶಿಕ್ಷಣ ವ್ಯವಸ್ಥೆ, ಆಧ್ಯಾತ್ಮಿಕ ಜ್ಞಾನ, ಆರೋಗ್ಯವೇ ಭಾಗ್ಯ – ಇಂತಹ ಸಮಾಜಮುಖಿ ಚಿಂತನೆಯೊಂದಿಗೆ ನಾಥ ಪರಂಪರೆಯನ್ನು ಮುಂದುವರಿಸುತ್ತಿದೆ.

**ನಾಥ ಸಂಪ್ರದಾಯ ಮತ್ತು ನಾಗ ಸಾಧುಗಳು:**

ದಶನಾಮಿ ಸಂಪ್ರದಾಯವು ಹಿಂದೂ ಸನ್ಯಾಸಿಗಳ ಒಂದು ಪ್ರಮುಖ ಪರಂಪರೆಯಾಗಿದೆ. ಈ ಸಂಪ್ರದಾಯವು 8 ಮತ್ತು 9ನೇ ಶತಮಾನದಲ್ಲಿ ಆದಿ ಶಂಕರಾಚಾರ್ಯರಿಂದ ವ್ಯವಸ್ಥಿತವಾಗಿ ಉದಯವಾಯಿತು ಎನ್ನಲಾಗುತ್ತದೆ. ಶಂಕರಾಚಾರ್ಯರ ಅದ್ವೈತ ವೇದಾಂತ ತತ್ವವನ್ನು ಈ ಪರಂಪರೆಯು ಅನುಸರಿಸುತ್ತದೆ. ದಶನಾಮಿ ಎಂದರೆ '10 ಹೆಸರುಗಳ ಸಂಪ್ರದಾಯ'ವಾಗಿದೆ. ಭಾರತಿ, ಸರಸ್ವತಿ, ಸಾಗರ, ತೀರ್ಥ, ಪುರಿ, ಆಶ್ರಮ, ಗಿರಿ, ಪರ್ವತ, ಅರಣ್ಯ, ವನ ಇವು ದಶನಾಮಿ ಸಂಪ್ರದಾಯಗಳಾಗಿವೆ.

ಈ ದಶನಾಮಿ ಸಂಪ್ರದಾಯದ ಯೋಧ ತಪಸ್ವಿಗಳೇ ನಾಗ ಸಾಧುಗಳು. 16ನೇ ಶತಮಾನದಲ್ಲಿ ಮೊಘಲರು ಭಾರತದಲ್ಲಿ ಆಳ್ವಿಕೆಯನ್ನು ಆರಂಭಿಸಿದರು. ಹಿಂದೂ ಧರ್ಮದ ವಿನಾಶಕ್ಕೆ ಪಣತೊಟ್ಟ ಮೊಘಲರ ವಿರುದ್ಧ ಮಧುಸೂದನ ಸರಸ್ವತಿಯವರು ಸೈನಿಕ ಸಾಧುಗಳನ್ನು ಒಗ್ಗೂಡಿಸಿದರು; ಅವರೇ ನಾಗ ಸಾಧುಗಳು. ನಾಗ ಸಾಧುಗಳು ರಕ್ಷಕರಾಗಿ, ಯೋಧರಾಗಿ ಮತ್ತು ತಪಸ್ವಿಗಳಾಗಿ ಖ್ಯಾತಿಯನ್ನು ಪಡೆದರು. ಹಿಂದೂ ಧರ್ಮದ ರಕ್ಷಕರಾಗಿ ನಿಂತರು. ನಾಗ ಸಾಧು ಪರಂಪರೆಯಲ್ಲಿ ಸೇರಲು ಯಾವುದೇ ನಿರ್ದಿಷ್ಟವಾದ ನಿಯಮಗಳಿರಲಿಲ್ಲ. ಜಾತಿ, ವರ್ಗ, ವಯಸ್ಸು, ಲಿಂಗ ಭೇದವಿಲ್ಲದೆ ಸನ್ಯಾಸವನ್ನು ಸ್ವೀಕರಿಸಲು ಅವಕಾಶ ನೀಡಲಾಗಿತ್ತು.

ನಾಥ ಸಂಪ್ರದಾಯ ಮತ್ತು ನಾಗ ಸಾಧುಗಳೆರಡೂ ಭಾರತೀಯ ಪ್ರಾಚೀನ ಶೈವ ಪಂಥಗಳಾಗಿವೆ. ಯೋಗ ಶಕ್ತಿಯ ಮಹತ್ವವನ್ನು ತಮ್ಮ ಸಾಧನೆಯಲ್ಲಿ ಅಳವಡಿಸಿಕೊಂಡಿದ್ದಾರೆ. ನಾಥ ಸಂಪ್ರದಾಯವು 10–12ನೇ ಶತಮಾನದಲ್ಲಿ ಮತ್ಸ್ಯೇಂದ್ರನಾಥ ಮತ್ತು ಗೋರಕ್ಷನಾಥ ಎಂಬ ಗುರು ಶಿಷ್ಯ ಯೋಗಿಗಳಿಂದ ಸ್ಥಾಪಿತವಾಯಿತು. ನಾಗ ಸಾಧುಗಳ ಪರಂಪರೆ ಶಂಕರರಿಂದ ಸ್ಥಾಪನೆಯಾಯಿತು. ಇವರಿಬ್ಬರ ಉದ್ದೇಶವೂ ಒಂದೇ; ಆಧ್ಯಾತ್ಮಿಕ ಪರಂಪರೆಯಲ್ಲಿ ಜನಸಾಮಾನ್ಯರನ್ನು

ತರುವುದು, ಜಾತೀಯತೆ ವಿರೋಧ, ಸರ್ವ ಪಂಥೀಯರಿಗೂ ಯೋಗ ಸಾಧನೆಯಲ್ಲಿ ಅವಕಾಶ ನೀಡುವುದು. ನಾಗ ಸಾಧು ಮತ್ತು ನಾಥ ಸಂಪ್ರದಾಯ ತತ್ವ ಚಿಂತನೆಗಳಲ್ಲಿ ಮಾತ್ರ ಸಮಾನವಾಗಿವೆ. ಆದರೆ ನಾಗ ಸಾಧುಗಳು ನಾಥ ಸಂಪ್ರದಾಯದ ಪ್ರವರ್ತಕರಾದ ಮತ್ಸ್ಯೇಂದ್ರನಾಥ ಮತ್ತು ಗೋರಕ್ಷನಾಥ ಹಾಗೂ ಉಳಿದ ಸಿದ್ಧ ಪರಂಪರೆಯ ಬಗ್ಗೆ ಎಲ್ಲೂ ಹೇಳಿಕೊಂಡಿಲ್ಲ. ಇವರು ನಂಬುವುದು ಶಂಕರಾಚಾರ್ಯರ ಅದ್ವೈತ ಸಿದ್ಧಾಂತವನ್ನು ಮಾತ್ರ. ಈ ಎರಡು ಸಂಪ್ರದಾಯಗಳಲ್ಲಿ ಬ್ರಹ್ಮಚರ್ಯ, ಯೋಗ, ಧ್ಯಾನ, ತಪಸ್ಸು, ಸಮಾಜದ ಒಳಿತು, ಆಧ್ಯಾತ್ಮಿಕ ಚಿಂತನೆಯ ಅಂಶಗಳು ಸಮಾನವಾಗಿವೆ.

ಜಗತ್ತು ಪರಿವರ್ತನಾಶೀಲವಾದದ್ದು, ಹಳೆಯದರ ಛಾಯೆಯ ಮೇಲೆ ಹೊಸದನ್ನು ಅಳವಡಿಸಿಕೊಂಡು ಹೊಸತನವನ್ನು ಕಾಣುವ ಹಂಬಲವಿದೆ. ಭಾರತೀಯ ಸಂಸ್ಕೃತಿಯ ಅಧ್ಯಯನದಲ್ಲಿ ಧರ್ಮ ಮತ್ತು ಪಂಥಗಳ ಕಾಲಮಾನಗಳನ್ನು ಗಮನಿಸಿದರೆ ಪರಿವರ್ತನೆಯ ಹೊಸ ಚಿಲುಮೆ ಹರಿದಂತಿದೆ. ಭಾರತದಲ್ಲಿ ಸಮಾಜದ ಕೆಳಸ್ತರ ಸಮುದಾಯಗಳಿಗೆ ಆಧ್ಯಾತ್ಮಿಕ ಹೊಸ ಭರವಸೆಯ ಕಿರಣವಾಗಿ ಮೂಡಿಸಿದ್ದು ನಾಥ ಸಂಪ್ರದಾಯ. ಹಠಯೋಗದ ತಳಹದಿಯಲ್ಲಿ ಶೈವ ಧರ್ಮ ಮತ್ತು ಬೌದ್ಧ ಧರ್ಮಗಳ ತಾತ್ವಿಕ ಸಾರವನ್ನು ಪಡೆದು, ಗುರು ಶಿಷ್ಯ ನಡುವಿನ ಅವಿನಾಭಾವ ಸಂಬಂಧದಿಂದ ಅನನ್ಯವಾಗಿ ನಿಲ್ಲುತ್ತದೆ. ಗುರು ಪಂಥದಲ್ಲಿ ಗುರು ಶಿಷ್ಯನನ್ನು ಹುಡುಕುವುದು, ಅವನಿಗೆ ದೀಕ್ಷೆ ನೀಡುವುದು, ಲೌಕಿಕ ಬದುಕಿನ ಸಂಬಂಧವನ್ನು ಕಡಿದುಕೊಂಡು ಮರು ಹುಟ್ಟನ್ನು ಪಡೆಯುವುದು, ಗುರುವೇ ದೇವರೆಂದು ಭಾವಿಸಿ ಸಮಾಜಮುಖಿಯಾಗಿ ಬದುಕುವುದು ನಾಥ ಸಂಪ್ರದಾಯದ ಮಾರ್ಗವಾಗಿದೆ. ಶೈವ ಧರ್ಮದಲ್ಲಿ ಬರುವ ಪಂಥಗಳಿಂದ ಅನೇಕ ಮೌಲ್ಯಯುತ ಮುತ್ತುಗಳನ್ನು ಆರಿಸಿ ಪೋಣಿಸಿದ ಮುತ್ತಿನ ಹಾರ ನಾಥ ಸಂಪ್ರದಾಯವಾಗಿದೆ. ಇತರ ಪಂಥಗಳೊಂದಿಗೆ ಹಲವಾರು ಅಂಶಗಳನ್ನು ಪಡೆದರೂ ತದನಂತರದಲ್ಲಿ ಬಂದಂತಹ ವಚನ ಸಾಹಿತ್ಯಕ್ಕೆ ಪ್ರೇರಣೆಯಾಗಿದ್ದು ಈ ಸಂಪ್ರದಾಯದ ವಿಶೇಷತೆಯಾಗಿದೆ.

**ಕೊನೆ ಟಿಪ್ಪಣಿಗಳು:**


1. ರಾಮಚಂದ್ರ ಚಿಂತಾಮಣ ಢೇರೆ (ಮರಾಠಿ ಮೂಲ), ಚಂದ್ರಕಾಂತ ಪೋಕಳೆ (ಅನು), (2024), ನಾಥ ಸಂಪ್ರದಾಯದ ಇತಿಹಾಸ, ಬೆಂಗಳೂರು: ಸ್ನೇಹ ಪ್ರಿಂಟರ್ಸ್, ಪು.ಸಂ. 23
2. ಅದೇ, ಪು.ಸಂ. 23
3. ರಹಮತ್ ತರೀಕೆರೆ, (2006), ಕರ್ನಾಟಕದ ನಾಥ ಪಂಥ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಪು.ಸಂ. 50
4. ಸಿದ್ಧಗಂಗಯ್ಯ ಹೆಚ್.ಕೆ. (ಸಂ), (1996), ಆದಿಚುಂಚನಗಿರಿ ಸ್ಥಲಮಹಾತ್ಮ್ಯ, ಮಂಡ್ಯ: ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಶ್ರೀ ಆದಿಚುಂಚನಗಿರಿ ಕ್ಷೇತ್ರ, ಪು.ಸಂ. 29
5. ಅದೇ, ಪು.ಸಂ. 26

6. ಅದೇ, ಪು.ಸಂ. 171
7. ಅದೇ, ಪು.ಸಂ. 171
8. ಚಿದಾನಂದಮೂರ್ತಿ ಎಂ., (2024), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿಸ್ತಶಕ 450–1150), ಬೆಂಗಳೂರು: ಸ್ವಪ್ನ ಬುಕ್ ಹೌಸ್, ಪು.ಸಂ. 171

## ಪರಾಮರ್ಶನ ಗ್ರಂಥಗಳು:


1. ರಾಜೇಶ್ವರಿ ಗೌಡ ಕೆ., (2001), ಆದಿಚುಂಚನಗಿರಿ: ಒಂದು ಸಾಂಸ್ಕೃತಿಕ ಅಧ್ಯಯನ, ಮಂಡ್ಯ: ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಆದಿಚುಂಚನಗಿರಿ ಕ್ಷೇತ್ರ.
2. ಚಿದಾನಂದಮೂರ್ತಿ ಎಂ., (2024), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿಸ್ತಶಕ 450–1150), ಬೆಂಗಳೂರು: ಸ್ವಪ್ನ ಬುಕ್ ಹೌಸ್.
3. ರಹಮತ್ ತರೀಕೆರೆ, (2006), ಕರ್ನಾಟಕದ ನಾಥ ಪಂಥ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
4. ರಾಮಚಂದ್ರ ಚಿಂತಾಮಣ ಢೇರೆ (ಮರಾಠಿ ಮೂಲ), ಚಂದ್ರಕಾಂತ ಪೋಕಳೆ (ಅನು), (2024), ನಾಥ ಸಂಪ್ರದಾಯದ ಇತಿಹಾಸ, ಬೆಂಗಳೂರು: ಸ್ನೇಹ ಪ್ರಿಂಟರ್ಸ್.
5. ಸಿದ್ಧಗಂಗಯ್ಯ ಹೆಚ್.ಕೆ. (ಸಂ), (1996), ಆದಿಚುಂಚನಗಿರಿ ಸ್ಥಲಮಹಾತ್ಮ್ಯ, ಮಂಡ್ಯ: ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಶ್ರೀ ಆದಿಚುಂಚನಗಿರಿ ಕ್ಷೇತ್ರ.
6. ಚಿದಾನಂದಮೂರ್ತಿ ಎಂ., (1970), ಸಂಶೋಧನಾ ತರಂಗ: ಸಂಪುಟ ಎರಡು, ಮಧ್ಯಕಾಲೀನ ಕರ್ನಾಟಕದ ಕೆಲವು ರಹಸ್ಯ ತಾಂತ್ರಿಕ ಪಂಥಗಳು, ಬೆಂಗಳೂರು: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.